KAUK620013402026

**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.</u>**

**-:<u>ಉಪಸ್ಥಿತರು</u>:-**

**<u>ಶ್ರೀ ನವೀನ್ ಕೋಪರ್ಡೆ.,</u>**

**ಬಿ.ಎ.,ಎಲ್.ಎಲ್.ಬಿ.,**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ ದಂಡಾಧಿಕಾರಿ, ಹೊನ್ನಾವರ.**

**<u>ದಿನಾಂಕ 16 ನೇ ಜುಲೈ ಮಾಹೆಯ 2026 ನೇ ಇಸವಿ</u>**

**<u>ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 160/2026</u>**

**<u>ಅರ್ಜಿದಾರರುঃ</u>-** 1. **ಪ್ರಶಾಂತ ಮಾದೇವ ನಾಯ್ಕ,**
ವಯಸ್ಸು ಸುಮಾರುঃ-38 ವರ್ಷ,
ಉದ್ಯೋಗঃ- ರೈತಾಬಿ,
ಸಾಕೀನঃ- ಮೋಳ್ಕೋಡ,
ತಾಲೂಕುঃ- ಹೊನ್ನಾವರ, (ಉ.ಕ).

2. **ನಾಗವೇಣಿ ಜಗದೀಶ ನಾಯ್ಕ,**
ವಯಸ್ಸು ಸುಮಾರುঃ-45 ವರ್ಷ,
ಉದ್ಯೋಗঃ- ಮನೆವಾರ್ತೆ,
ಸಾಕೀನঃ- ಗುಂಡಬಾಳ,
ತಾಲೂಕುঃ- ಹೊನ್ನಾವರ, (ಉ.ಕ).

**(ಅರ್ಜಿದಾರರ ಪರವಾಗಿ ಶ್ರೀ. ಎಸ್.ಜಿ.ಎಚ್., ವಕೀಲರು.)**

**-<u>ವಿರುದ್ಧ</u>-**

**<u>ಎದುರುದಾರರುঃ</u>-** ಮಾನ್ಯ ತಹಶೀಲ್ದಾರರು,
ಜನನ-ಮರಣ ನೋಂದಣಾಧಿಕಾರಿಗಳು, ಹೊನ್ನಾವರ,

ತಾಲೂಕುಃ ಹೊನ್ನಾವರ, (ಉ.ಕ).

**( ಎದುರುದಾರರು ಏಕಪಕ್ಷೀಯ)**

*****

**-:ಆದೇಶ:-**

ಅರ್ಜಿದಾರರು, ಸದರಿ ಅರ್ಜಿಯನ್ನು ಜನನ ಮತ್ತು ಮರಣ ನೋಂದಣಿ ಕಾಯ್ದೆ 1969 ರ ಕಲಂ.13(3) ರಡಿಯಲ್ಲಿ ಸಲ್ಲಿಸಿದ್ದು ಇರುತ್ತದೆ.

ಅರ್ಜಿದಾರರ **ತಾಯಿಯಾದ ಲಕ್ಷ್ಮೀ ಮಾದೇವ ನಾಯ್ಕರವರು ದಿನಾಂಕ 23-03-2022 ರಂದು ಹೊನ್ನಾವರ ತಾಲೂಕಿನ ಕೆಳಗಿನ ಇಡಗುಂಜಿ ಗ್ರಾಮದಲ್ಲಿರುವ ಅವರ ಮನೆಯಲ್ಲಿ** ಮರಣ ಹೊಂದಿರುವ ಬಗ್ಗೆ ಸಂಬಂಧಪಟ್ಟ ಜನನ ಮತ್ತು ಮರಣ ನೋಂದಣಿ ದಾಖಲಾತಿಯಲ್ಲಿ ಮರಣ ದಿನಾಂಕವನ್ನು ನೋಂದಾಯಿಸಿಕೊಂಡು ಮರಣ ದೃಢೀಕರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ಆದೇಶಿಸಬೇಕೆಂದು ಪ್ರಾರ್ಥನೆ ಸಲ್ಲಿಸಿರುತ್ತಾರೆ.

02. **ಅರ್ಜಿದಾರರ ಅರ್ಜಿಯ ಸಂಕ್ಷಿಪ್ತ ಸಂಗತಿಗಳು ಈ ಕೆಳಕಂಡಂತೆ ಇರುತ್ತದೆ:-**

ಅರ್ಜಿಯಲ್ಲಿ ಹೇಳಿರುವಂತೆ, ಅರ್ಜಿದಾರರ **ತಾಯಿಯಾದ ಲಕ್ಷ್ಮೀ ಮಾದೇವ ನಾಯ್ಕರವರು ದಿನಾಂಕ 23-03-2022 ರಂದು ಹೊನ್ನಾವರ ತಾಲೂಕಿನ ಕೆಳಗಿನ ಇಡಗುಂಜಿ ಗ್ರಾಮದಲ್ಲಿರುವ ಅವರ ಮನೆಯಲ್ಲಿ** ಮರಣ ಹೊಂದಿದ್ದು ಇರುತ್ತದೆ. ಮುಂದುವರೆದು, ಅರ್ಜಿದಾರರ ಕುಟುಂಬದವರಿಗೆ ಅಷ್ಟೊಂದು ಕಾನೂನು ತಿಳುವಳಿಕೆ ಇಲ್ಲದೇ ಇರುವುದರಿಂದ ಸಂಬಂಧಪಟ್ಟ ಕಛೇರಿಯಲ್ಲಿ ಲಕ್ಷ್ಮೀ ಮಾದೇವ ನಾಯ್ಕರವರ ಮರಣ ದಿನಾಂಕ ನೋಂದಣಿ ಮಾಡಿಸಿದ್ದು ಇರುವುದಿಲ್ಲ. ಆದ್ದರಿಂದ ಅರ್ಜಿದಾರರು ಲಕ್ಷ್ಮೀ ಮಾದೇವ ನಾಯ್ಕರವರ ಮರಣ ದಾಖಲಾತಿಯನ್ನು ಪೂರೈಸುವಂತೆ ಎದುರುದಾರರ ಕಛೇರಿಯಲ್ಲಿ ಅರ್ಜಿ ಸಲ್ಲಿಸಿದಾಗ ಅರ್ಜಿದಾರರ ತಾಯಿಯಾದ ಲಕ್ಷ್ಮೀ ಮಾದೇವ ನಾಯ್ಕರವರ ಮರಣ ದಿನಾಂಕವು ಸಂಬಂಧಪಟ್ಟ ದಾಖಲೆಗಳಲ್ಲಿ ನೋಂದಣಿಯಾಗಿರುವುದಿಲ್ಲ ಎಂದು

ಎದುರುದಾರರು ಲಕ್ಷ್ಮೀ ಮಾದೇವ ನಾಯ್ಕರವರ ಮರಣದ ಕುರಿತು ದಿನಾಂಕ 17-01-2025 ರಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಈಗ ಅರ್ಜಿದಾರರಿಗೆ ವಾರಿಸಾ ಮಾಡುವ ಸಲುವಾಗಿ ಅವರ ತಾಯಿಯ ಮರಣ ಪ್ರಮಾಣ ಪತ್ರವು ಅತೀ ಅವಶ್ಯಕ ಇರುತ್ತದೆ. ಆದ್ದರಿಂದ, ಅರ್ಜಿಯಲ್ಲಿ ಕೇಳಿರುವಂತೆ ಆದೇಶವನ್ನು ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ.

03. ನಂತರ ಮಾನ್ಯ ನ್ಯಾಯಾಲಯವು ಎದುರುದಾರರಿಗೆ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ಎದುರುದಾರರಿಗೆ ಜಾರಿಯಾಗಿದ್ದರೂ ಸಹ, ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಿದ್ದು ಇರುವುದಿಲ್ಲ. ತದನಂತರ ದಿನಪತ್ರಿಕೆಯಲ್ಲಿ ಈ ಕುರಿತು ಪ್ರಕಟಣೆ ಹೊರಡಿಸಿದ್ದರೂ ಸಹ ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಎದುರುದಾರರನ್ನು ಗೈರಾಗಿ ಇರಿಸಲಾಯಿತು. ಅರ್ಜಿದಾರರು ಅರ್ಜಿಯಲ್ಲಿ ಪ್ರತಿಪಾದಿಸಿದ ಸಂಗತಿಗಳನ್ನು ಪುಷ್ಠೀಕರಿಸುವ ಸಲುವಾಗಿ ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ಮುಖ್ಯ ವಿಚಾರಣೆಯ ಬದಲಾಗಿ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿ ಅರ್ಜಿಯಲ್ಲಿ ಹೇಳಿದ ಸಂಗತಿಗಳನ್ನೇ ಪುನರುಚ್ಚರಿಸಿರುತ್ತಾರೆ ಹಾಗೂ ನಿಪಿ-1 ರಿಂದ ನಿಪಿ-5 ರ ದಾಖಲೆಗಳನ್ನು ನಿಶಾನೆಗೊಳಿಸಿರುತ್ತಾರೆ.

04. ಅರ್ಜಿದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

05. ಈ ನ್ಯಾಯಾಲಯವು ಈ ಕೆಳಗಿನ ಅಂಶಗಳನ್ನು ನಿರ್ಧರಿಸುತ್ತದೆ.

1. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೇಳಿರುವಂತಹ ಪರಿಹಾರ ಪಡೆಯಲು ಅರ್ಹರೇ?
2. ಮಾಡುವ ಆದೇಶ ಏನು?

06. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

**ಅಂಶ ಸಂಖ್ಯೆ 1 :- ಸಕಾರಾತ್ಮಕವಾಗಿ,**

**ಅಂಶ ಸಂಖ್ಯೆ 2 :– ಅಂತಿಮ ಆದೇಶದಂತೆ,**

ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ,

* * * * *

## –: ಕಾರಣಗಳು :–

07. **ಅಂಶ ಸಂಖ್ಯೆ 1**:– ಪ್ರಸ್ತುತ ಅರ್ಜಿಯಲ್ಲಿ ಪ್ರತಿಪಾದಿಸಿದ ಸಂಗತಿಗಳನ್ನು ಪುಷ್ಟೀಕರಿಸುವ ಸಲುವಾಗಿ ಅರ್ಜಿದಾರರು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ಮುಖ್ಯ ವಿಚಾರಣೆಯ ಬದಲಾಗಿ ಸಾಕ್ಷ್ಯಪ್ರಮಾಣಪತ್ರವನ್ನು ಸಲ್ಲಿಸಿ ಅರ್ಜಿಯಲ್ಲಿ ಹೇಳಿದ ಸಂಗತಿಗಳನ್ನೇ ಪುನರುಚ್ಚರಿಸಿರುತ್ತಾರೆ ಹಾಗೂ ನಿಪಿ-1 ರಿಂದ ನಿಪಿ-5 ರ ದಾಖಲೆಗಳನ್ನು ನಿಶಾನೆಯಾಗಿ ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಅಲಭ್ಯ ಪ್ರಮಾಣಪತ್ರವನ್ನು ನಿಪಿ-1 ಎಂದು, 1 ನೇ ಅರ್ಜಿದಾರರ ಆಧಾರ ಕಾರ್ಡ್ ನ ನೋಟರೈಸ್ಡ್ ಪ್ರತಿಯನ್ನು ನಿಪಿ-2 ಎಂದು, 2 ನೇ ಅರ್ಜಿದಾರರ ಆಧಾರ ಕಾರ್ಡ್ ನ ನೋಟರೈಸ್ಡ್ ಪ್ರತಿಯನ್ನು ನಿಪಿ-3 ಎಂದು, ದಿನಾಂಕ 16-06-2026 ರ ಜನ ಮಾಧ್ಯಮ ಪತ್ರಿಕೆಯನ್ನು ನಿಪಿ-4 ಎಂದು, ವಂಶವೃಕ್ಷದ ಪ್ರಮಾಣ ಪತ್ರವನ್ನು ನಿಪಿ-5 ಎಂದು ಗುರುತಿಸಿರುತ್ತಾರೆ.

ಮುಂದುವರೆದು, ಅರ್ಜಿದಾರರ ತಾಯಿಯಾದ **ಲಕ್ಷ್ಮೀ ಮಾದೇವ ನಾಯ್ಕರವರು ದಿನಾಂಕ 23-03-2022 ರಂದು ಹೊನ್ನಾವರ ತಾಲೂಕಿನ ಕೆಳಗಿನ ಇಡಗುಂಜಿ ಗ್ರಾಮದಲ್ಲಿರುವ ಅವರ ಮನೆಯಲ್ಲಿ** ಮರಣ ಹೊಂದಿರುತ್ತಾರೆ. ಸದರಿ ಮರಣ ದಿನಾಂಕವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿಲ್ಲವೆಂದೂ, ಈಗ ಅರ್ಜಿದಾರರಿಗೆ ವಾರಿಸಾ ಮಾಡುವ ಸಲುವಾಗಿ ಅವರ ತಾಯಿಯ ಮರಣ ಪ್ರಮಾಣ ಪತ್ರವು ಅತೀ ಅವಶ್ಯಕವಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಪಿ.ಡಬ್ಲ್ಯೂ-1 ರವರು, ಸಂಬಂಧಪಟ್ಟ ಜನನ ಮತ್ತು ಮರಣ ನೋಂದಣಾಧಿಕಾರಿಗಳು ದಿನಾಂಕ 17-01-2025 ರಂದು ನೀಡಿರುವ ಅಲಭ್ಯ ಪ್ರಮಾಣಪತ್ರವನ್ನು ನಿಪಿ-1 ಎಂದು, 1 ನೇ ಅರ್ಜಿದಾರರ ಆಧಾರ ಕಾರ್ಡ್ ನ ನೋಟರೈಸ್ಡ್ ಪ್ರತಿಯನ್ನು ನಿಪಿ-2 ಎಂದು, 2 ನೇ ಅರ್ಜಿದಾರರ ಆಧಾರ ಕಾರ್ಡ್ ನ ನೋಟರೈಸ್ಡ್

ಪ್ರತಿಯನ್ನು ನಿಪಿ-3 ಎಂದು, ದಿನಾಂಕ 16-06-2026 ರ ಜನ ಮಾಧ್ಯಮ ಪತ್ರಿಕೆಯನ್ನು ನಿಪಿ-4 ಎಂದು, ಪತ್ರಿಕೆಯ ಪ್ರಕಟಣೆಯ ಭಾಗವನ್ನು ನಿಪಿ-4(ಎ) ಎಂದು, ವಂಶವೃಕ್ಷದ ಪ್ರಮಾಣ ಪತ್ರವನ್ನು ನಿಪಿ-5 ಎಂದು ಗುರುತಿಸಿರುತ್ತಾರೆ, ಸದರಿ ದಾಖಲಾತಿಗಳನ್ನು ಪರಿಶೀಲಿಸಿ ನೋಡಿದಾಗ, ಲಕ್ಷ್ಮೀ ಮಾದೇವ ನಾಯ್ಕುರವರ ಮರಣ ದಿನಾಂಕವು ಜನನ ಮತ್ತು ಮರಣ ರಿಜಿಸ್ಟರ್ ದಾಖಲಾತಿಯಲ್ಲಿ ನೋಂದಣಿಯಾಗಿರುವುದಿಲ್ಲವೆಂದು ಕಂಡು ಬರುತ್ತದೆ. ಈಗ ಅರ್ಜಿದಾರರಿಗೆ ವಾರಿಸಾ ಮಾಡುವ ಸಲುವಾಗಿ ತಾಯಿಯ ಮರಣ ಪ್ರಮಾಣ ಪತ್ರವು ಅತೀ ಅವಶ್ಯಕವಾಗಿ ಬೇಕಾಗಿರುತ್ತದೆ ಎಂಬುದಾಗಿ ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಿರುತ್ತಾರೆ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ, ಅರ್ಜಿದಾರರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎಂಬ ಅಭಿಪ್ರಾಯವನ್ನು ಮಾನ್ಯ ನ್ಯಾಯಾಲಯವು ವ್ಯಕ್ತಪಡಿಸುತ್ತದೆ. ಒಂದಾನುವೇಳೆ ಈ ಅರ್ಜಿಯನ್ನು ಪುರಸ್ಕರಿಸಿದರೇ ಎದುರುದಾರರಿಗಾಗಲೀ ಅಥವಾ ಇತರರಿಗಾಗಲೀ ಯಾವುದೇ ರೀತಿಯ ನಷ್ಟ ಉಂಟಾಗಲಾರದೆಂದು ಅಭಿಪ್ರಾಯಪಟ್ಟು ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂಬ ತೀರ್ಮಾನಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. **ಆದ್ದರಿಂದ, ಅಂಶ ಸಂಖ್ಯೆ 1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**08. ಅಂಶ ಸಂಖ್ಯೆ 2**:- ಅಂಶ ಸಂಖ್ಯೆ 1 ರಲ್ಲಿ ಚರ್ಚಿಸಿದ ಕಾರಣಗಳಿಂದಾಗಿ, ಈ ಕೆಳಕಂಡಂತೆ ಅಂತಿಮ ಆದೇಶ ಮಾಡಲಾಗಿದೆ.

## -:ಆದೇಶ:-

ಅರ್ಜಿದಾರರು, ಜನನ ಮತ್ತು ಮರಣ ನೋಂದಣಿ ಕಾಯ್ದೆ-1969 ರ ಕಲಂ. 13(3) ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅರ್ಜಿದಾರರ **ತಾಯಿಯಾದ ಲಕ್ಷ್ಮೀ ಮಾದೇವ ನಾಯ್ಕರವರು** **ದಿನಾಂಕ** 23-03-2022 **ರಂದು ಹೊನ್ನಾವರ ತಾಲೂಕಿನ ಕೆಳಗಿನ ಇಡಗುಂಜಿ ಗ್ರಾಮದಲ್ಲಿರುವ ಅವರ ಮನೆಯಲ್ಲಿ** ಮರಣ ಹೊಂದಿರುತ್ತಾರೆ ಎಂದು ತಮ್ಮ ಜನನ ಮತ್ತು ಮರಣ ದಾಖಲಾತಿಯಲ್ಲಿ ನೋಂದಾಯಿಸಿಕೊಳ್ಳುವಂತೆ ಎದುರುದಾರರಿಗೆ ಆದೇಶಿಸಲಾಗಿದೆ.

ಅರ್ಜಿದಾರರಿಂದ ಅವಶ್ಯಕ ಶುಲ್ಕ ಪಡೆದು ಅವರ ತಾಯಿಯಾದ ಲಕ್ಷ್ಮೀ ಮಾದೇವ ನಾಯ್ಕರವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದಲ್ಲಿ ನೇರವಾಗಿ ಗಣಕೀಕೃತ ಮಾಡಿಸಿ, ನಂತರ ಅದನ್ನು ಓದಿ ತಪ್ಪುಗಳನ್ನು ತಿದ್ದಿದ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ **16-07-2026** ರಂದು ಘೋಷಿಸಲಾಯಿತು)

ಸಹಿ ಇದೆ/-

**(ನವೀನ್ ಕೋಪರ್ಡೆ)**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಮ್.ಎಫ್.ಸಿ., ಹೊನ್ನಾವರ.**

* * * * *

**-: ಅನುಬಂಧ:-**

1. **ಅರ್ಜಿದಾರರ- ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿ:-**

ಪಿ.ಡಬ್ಲ್ಯೂ-1 - ಪ್ರಶಾಂತ ಮಾದೇವ ನಾಯ್ಕ,

2. **ಅರ್ಜಿದಾರರ- ಪರ ಗುರುತಿಸಿಕೊಂಡಿರುವ ದಾಖಲಾತಿಗಳು:-**

ನಿಪಿ-1 - ಅಲಭ್ಯ ಪ್ರಮಾಣ ಪತ್ರ.

ನಿಪಿ-2 - 1 ನೇ ಅರ್ಜಿದಾರರ ಆಧಾರಕಾರ್ಡಿನ ನೋಟರೈಸ್ಡ್ ಪ್ರತಿ.

ನಿಪಿ-3 - 2 ನೇ ಅರ್ಜಿದಾರರ ಆಧಾರಕಾರ್ಡಿನ ನೋಟರೈಸ್ಡ್ ಪ್ರತಿ.

ನಿಪಿ-4 - ದಿನಾಂಕ 16-06-2026 ರ ಜನ ಮಾಧ್ಯಮ ಪತ್ರಿಕೆ.

ನಿಪಿ-4(ಎ) - ಪತ್ರಿಕೆಯ ಪ್ರಕಟಣೆಯ ಭಾಗ.

ನಿಪಿ–5 – ವಂಶವೃಕ್ಷ ಪ್ರಮಾಣ ಪತ್ರ.

3. **ಎದುರುದಾರರ– ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ–**

–ಇಲ್ಲ–

4. **ಎದುರುದಾರರ– ಪರ ಗುರುತಿಸಿಕೊಂಡಿರುವ ದಾಖಲಾತಿಗಳುಃ–**

–ಇಲ್ಲ–

ಸಹಿ ಇದೆ/–

(**ನವೀನ್ ಕೋಪರ್ಡೆ**)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಮ್.ಎಫ್.ಸಿ., ಹೊನ್ನಾವರ.**

* * * * *